ವಿಚಾರ ಮಾಡುತ್ತೇನೆಂದು ಈ ಸದನದಲ್ಲಿ ಹೇಳಿದ್ದೇನೆ. ಆದಷ್ಟು ಬೇಗನೆ ಆ ಸಭೆಯನ್ನು ಕರೆಯುತ್ತೇನೆ.

ಆಮೇಲೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದರು, ಈ ಲಿಮಿಟ್ 10, 5, 18, ಕಿ.ಮೀ ಏನು ಹಾಕಿದ್ದೇವೆ ಇವತ್ತು ಆ ನಗರ ವಿಸ್ತರಣೆ ಆಗುವ ರೀತಿಯಲ್ಲಿ ಲಿಮಿಟ್ ಜಾಸ್ತಿಯಾಗುವುದಿಲ್ಲ. ಮೊದಲು ಏನು ಲಿಮಿಟ್ ಹಾಕಿದ್ದೇವೆ, ಅದೇ continue ಆಗುತ್ತದೆಂದು ಸ್ಪಷ್ಟೀಕರಣ ಮಾಡುತ್ತಿದ್ದೇನೆ ಮತ್ತು ಈಗ rejected case ಇವೆ ಅವುಗಳ ಬಗ್ಗೆ ಈಗ ಹೊಸದಾಗಿ ಒಂದು ಅವಕಾಶ ಕೊಡಬೇಕೆಂದು ಕೆಲವರು ಶಾಸಕರು ಹೇಳಿದರು, ಅದರ ಬಗ್ಗೆ bona fide cultivators ಯಾರಿದ್ದಾರೆ, ಅವರಲ್ಲಿ ರಿಜೆಕ್ಟ್ ಆದಂಥವರು ಯಾರಿದ್ದಾರೆ, ಅಂಥವರ ಬಗ್ಗೆ ಮತ್ತೆ ಸರ್ಕಾರ ಚಿಂತನೆಯನ್ನು ಮಾಡಿ ಅವಕಾಶವನ್ನು ಕೊಡುವುದಾದರೆ ಆ ರೀತಿಯ ಅವಕಾಶವನ್ನು ಕೊಡುತ್ತೇವೆ. ಹೀಗಾಗಿ ಈಗ ನಾನು ದಯವಿಟ್ಟು ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ವಿನಂತಿಸುತ್ತೇನೆ.

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ 2007 ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.**

ಖಂಡ 2 ರಿಂದ 3 ರವರೆಗೆ

**ಅಧ್ಯಕ್ಷರು** :– "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**(ಖಂಡ 2, 3 ಮತ್ತು 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)** :– ಮಾನ್ಯ ಅಧ್ಯಕ್ಷರೇ, 2007ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ 2007 ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಈಗ ಸದನವನ್ನು ಮಧ್ಯಾಹ್ನ 3 : 45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸಭೆಯು ಮಧ್ಯಾಹ್ನ 2 : 45 ನಿಮಿಷಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3 : 45 ಗಂಟೆಗೆ ಸೇರುವಂತೆ ನಿರ್ಣಯಿಸಿತು)**

**(ಸದನವು ಪುನಃ ಮಧ್ಯಾಹ್ನ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

## 6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ :– ಉಳ್ಳಾಗಡ್ಡಿ ಖರೀದಿ–ಹಣ ಬಿಡುಗಡೆ ಬಗ್ಗೆ.

**ಶ್ರೀ ಡಿ.ಆರ್. ಪಾಟೀಲ್ (ಗದಗ)** :– ಮಾನ್ಯ ಅಧ್ಯಕ್ಷರೆ, ಗದಗ ಜಿಲ್ಲೆಯಲ್ಲಿ ಉಳ್ಳಾಗಡ್ಡಿಯ ಬೆಲ್ಲು ಕೊಟ್ಟಿಲ್ಲ. ಇದರ ಬಗ್ಗೆ refer ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ನಿನ್ನೆಯೇ ಕೇಳಿದ್ದೆ. ಸದನದಲ್ಲಿ ಸಂಬಂಧಪಟ್ಟ Minister ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ಸರ್ಕಾರ ಸುಮಾರು 16 ಕೋಟಿ ರೂಪಾಯಿಗಳಷ್ಟು ಉಳ್ಳಾಗಡ್ಡಿಯ ಬಿಲ್ ಕೊಡುವುದಿದೆ. ಅದರಲ್ಲಿ 11 ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಇನ್ನು 5 ಕೋಟಿ 46 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಬೇರೆ ಸಂಘಗಳ ಮುಖಾಂತರ ಸುಮಾರು ಏಳೂವರೆ ಸಾವಿರದಷ್ಟು